ಊ) ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಕುಡಿಯುವ ನೀರಿನ ಸಮಸ್ಯೆ.

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಉಪಾಧ್ಯಕ್ಷರೆ, ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ವಿಪರೀತವಾಗಿದೆ. ಇಲ್ಲಿ ನದಿಯಲ್ಲಿ ನೀರು ಇದೆ, ಮತ್ತೆ ವೆಂಟೆಡ್ ಡ್ಯಾಮ್‌ನಲ್ಲೂ ಸಾಕಷ್ಟು ನೀರಿದೆ. ಆದರೆ ಪಂಪ್‌ಗಳಿಗೆ ಲೋವೋಲ್ಟೆಜ್‌ನಿಂದ ನೀರು ಸರಬರಾಜು ತೊಂದರೆಯಾಗಿದೆ. ಈ ನಿಟ್ಟಿನಲ್ಲಿ ಯಾವ ಪಂಪ್ ಸ್ಟೇಷನ್‌ನಲ್ಲೂ ಸರಿಯಾಗಿ ನೀರು ಪಂಪ್ ಆಗದೇ ನೀರಿನ ಸಮಸ್ಯೆ ಬಿಗಡಾಯಿಸಿದೆ. ಆದುದರಿಂದ ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಪಂಪ್ ಸ್ಟೇಷನ್‌ಗಳಿಗೆ ವೋಲ್ಟೇಜ್ ಬುಸ್ಟರ್ ಟ್ರಾನ್ಸ್ ಫಾರ್ಮರ್‌ಗಳನ್ನು ಅಳವಡಿಸಬೇಕು. ಇದನ್ನು ಎಲ್ಲಾ ಪಂಪ್ ಸ್ಟೇಷನ್‌ಗಳಲ್ಲೂ ಅಳವಡಿಸಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ಇದೇ ರೀತಿಯಲ್ಲಿ ನೀರಿನ ಸಮಾನ ವಿತರಣೆ ವ್ಯವಸ್ಥೆಯನ್ನು ಸುಧಾರಿಸಲು ಬೇಕಾಗವಂತಹ ವಾಲ್ವ್ ಸಿಸ್ಟಂ ಅನ್ನು ಅಳವಡಿಸಬೇಕು. ಮೂರನೆಯದಾಗಿ ಬೇಳೂರು ಪಂಪಿಂಗ್ ಸ್ಟೇಷನ್‌ನಲ್ಲಿ ಕನಿಷ್ಠ 1 ಎಂಡಿ ನೀರು ಸೋರಿಕೆಯಾಗುತ್ತಿದೆ ಎಂಬ ಮಾಹಿತಿ ಬಂದಿದೆ, ಇದನ್ನು ತಕ್ಷಣ ನಿಲ್ಲಿಸುವಂತಹ ಕಾರ್ಯ ಮಾಡಬೇಕೆಂದು ಮಾನ್ಯ ಸಚಿವರ ಗಮನಕ್ಕೆ ತರಲಿಚ್ಛಿಸುತ್ತೇನೆ.

ಶ್ರೀ ಬಿ. ಎನ್. ಬಚ್ಚೇಗೌಡ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ತಿಳಿಸಿರುವ ಹಾಗೆ ಮಂಗಳೂರಿಗೆ ಸಾಕಷ್ಟು ನೀರು ಕೊಡುವ ಕಾರ್ಯ ಸುಧಾರಣೆ ಆಗಿದೆ. ಆದರೆ ಪವರ್‌ಫೆಲ್ಯೂರ್ ಮತ್ತು ವೋಲ್ಟೇಜ್ ಡ್ರಾಪ್ ಆಗಿರುವುದರಿಂದ ಅದಕ್ಕೆ ಎಕ್ಸ್‌ಪ್ರೆಸ್ ಫೀಡರ್ ಅನ್ನು ಹಾಕಿ ಪವರ್‌ಸಪ್ಲೈ ಇಂಪ್ರೂವ್ ಮಾಡಬೇಕು, ಇದರ ಜೊತೆಗೆ ಪಂಪ್‌ಗಳು ಕೆಟ್ಟು ಹೋಗಿದೆ ಎಂದು ಹೇಳಿದ್ದಾರೆ ಅದನ್ನು ಸರಿಮಾಡ ಬೇಕು. ಈಗ ಸಾಕಷ್ಟು ದುರಸ್ತಿ ಕಾರ್ಯವನ್ನು ಮಾಡಿದ್ದಾರೆ. ನಾವು ಮಾಹಿತಿ ಏನು ಎಂಬುದನ್ನು ತಿಳಿದುಕೊಂಡು ಅದನ್ನು ಸರಿಪಡಿಸುವಂತಹ ಕಾರ್ಯವನ್ನು ಮಾಡುತ್ತೇವೆ.

ಋ) ಕೊಡಗಿನ ಕುಶಾಲನಗರದ ಆನೆಕಾಡು, ಅತ್ತೂರು, ನಲ್ಲೂರು, ಹೇರೂರು, ನಾಗಪೋಕಲ, ಬಲಮಾಟ ಕಾಡುಗಳಿಗೆ ಬೆಂಕಿ ಬಿದ್ದಿರುವುದು.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ (ಸೋಮವಾರ ಪೇಟೆ) : ಮಾನ್ಯ ಉಪಾಧ್ಯಕ್ಷರೆ, ದಿ: 1-3-99ರಂದು ಕೊಡಗಿನ ಕುಶಾಲನಗರದ ಆನೆಕಾಡು, ಅತ್ತೂರು ನಲ್ಲೂರು ಹೇರೂರು, ನಾಗಪೋಕಲ, ಬಲಮಾಟಿ, ಈ ಕಾಡುಗಳಿಗೆ ಬೆಂಕಿ ಬಿದ್ದು ಸುಮಾರು ಏಳು ದಿವಸಗಳು ಬೆಂಕಿಯ ಅನಾಹುತದಿಂದ 10 ಕೋಟಿ ರೂಪಾಯಿಗಳ ಮರಗಳು ಬೆಂದು ಹೋಗಿದೆ. ಇದರ ಬಗ್ಗೆ ಪ್ರಜಾವಾಣಿ ಪತ್ರಿಕೆಯಲ್ಲೂ ಆರ್ಟಿಕಲ್ ದಿ: 23-3-99ರಲ್ಲಿ ಬಂದಿದೆ. ಅದು ಉರಿಯುವ ಸಾಲಿಗೆಗೆ ಸಿಕ್ಕ ನಾಗರಹೊಳೆ ಎಂದು ಬಂದಿದೆ, ಇದರ ಫೋಟೋ ಸಹ ಬಂದಿದೆ. ಮಾನ್ಯ ಮಂತ್ರಿಯವರು ಮತ್ತು ಡಿ.ಎಫ್ ರವರು 50 ಸಾವಿರ ರೂಪಾಯಿಗಳು ನಷ್ಟವಾಗಿದೆ ಎಂದು ಹೇಳಿದ್ದಾರೆ. ಆದರೆ ಇಲ್ಲಿ 10ಕೋಟಿ ರೂಪಾಯಿಗಳ ನಷ್ಟವಾಗಿದ್ದು, ಇದನ್ನು ಸಿ.ಒ.ಡಿ. ತನಿಖೆಗೆ ರೆಫರ್ ಮಾಡಬೇಕು. ಈ ವಿಚಾರ ಎಲ್ಲಾ ಪತ್ರಿಕೆಗಳಲ್ಲೂ ಸಾಮಾಜಿಕರಣಕ್ಕೆ ಕಾಳಕಿಂಚಿನಂತೆ ಹರಡಿದ ಬೆಂಕಿ ಎಂದು ಕೊಟ್ಟು ಸುಮಾರು 1 ಕೋಟಿ 67 ಲಕ್ಷ ರೂಪಾಯಿಗಳನ್ನು ಪಂಚಾಯತ್ ರಾಜ್ ಅಡಿಯಲ್ಲಿ ತೆಗೆದುಕೊಂಡ ಕಾಮಗಾರಿ ಕೆಲಸದಲ್ಲಿ ಅರಣ್ಯ ನಾಶವಾಗಿದೆ ಎಂದು ಎಲ್ಲಾ ರಾಜ್ಯದ ಪತ್ರಿಕೆಗಳಲ್ಲೂ ಬಂದಿದೆ. ಆದುದರಿಂದ ಅದನ್ನು ಸಿ.ಒ.ಡಿಗೆ ಒಪ್ಪಿಸಬೇಕೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ.

3.50 ಪಿ.ಎಂ.

ಶ್ರೀ ಡಿ.ಮಂಜುನಾಥ (ಅರಣ್ಯ ಸಚಿವರು): ಮಾನ್ಯ ಉಪಾಧ್ಯಕ್ಷರೇ, ಅಲ್ಲಿ ಬೆಂಕಿ ಬಿದ್ದಿರುವುದು ನಿಜ. ಅವರು 10 ಕೋಟಿ ರೂಪಾಯಿ ನಷ್ಟವಾಗಿದೆ ಎಂದು ಹೇಳುತ್ತಿದ್ದಾರೆ. ನಿಮ್ಮಲ್ಲಿರುವ ಮಾಹಿತಿಗಳನ್ನು ಕಳುಹಿಸಿಕೊಡಿ. ನಾನು ನಿಮ್ಮನ್ನು ಕರೆದುಕೊಂಡು ಹೋಗುತ್ತೇನೆ. ನಾವಿಬ್ಬರೂ ಹೋಗೋಣ. ಅಲ್ಲಿ ಬೆಂಕಿ ಬಿದ್ದಿದ್ದೆ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಆ ಪ್ರದೇಶದಲ್ಲಿ ಯಾವುದೇ ವನ್ಯ ಜೀವಿಗಳು ನಾಶವಾಗಿಲ್ಲ ಮತ್ತು ಬೆಲೆ ಬಾಳುವಂಥ ಮರಗಳೂ ನಾಶವಾಗಿಲ್ಲ. ಹುಲ್ಲು ಸುಟ್ಟು ಹೋಗಿದೆ. ಅದನ್ನು ಆರಿಸಲು ಪ್ರಯತ್ನ ಮಾಡಿದ್ದಾರೆ. ಈ ಬೆಳಿಗ್ಗೆ ನಾನು ಅಲ್ಲಿಯ ಕನ್ಸರ್ವೇಟರ್ ಹತ್ತಿರ ಮಾತನಾಡಿದ್ದೇನೆ. ಅವರು ವರದಿ ಕಳುಹಿಸಿರುವ ಪ್ರಕಾರ 50 ಸಾವಿರ ರೂಪಾಯಿ ನಷ್ಟವಾಗಿದೆ. ನೀವು ಒಂದು ಸಲ 10 ಕೋಟಿ ರೂಪಾಯಿ ಎಂದು ಹೇಳುತ್ತಿದ್ದೀರಿ, ಮತ್ತೊಂದು ಸಲ 1 ಕೋಟಿ 67 ಲಕ್ಷ ರೂಪಾಯಿ ಎಂದು ಹೇಳತ್ತಿದ್ದೀರಿ. ಅದಕ್ಕೋಸ್ಕರವಾಗಿ ಈ ಅಧಿವೇಶನ ಮುಗಿದ ಮೇಲೆ ನಾನು ನಿಮ್ಮನ್ನು ಅಲ್ಲಿಗೆ ಕರೆದುಕೊಂಡು ಹೋಗುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಉಪಾಧ್ಯಕ್ಷರೇ, ಅಲ್ಲಿ ಪ್ರಾಣಿಗಳು ಸತ್ತಿವೆ. ತಾವು ಪ್ರಾಮಾಣಿಕವಾಗಿ ತನಿಖೆ ಮಾಡಿ. ನಾಗರಹೊಳೆಯಲ್ಲಿ ಪ್ರತಿವರ್ಷ ಸುಟ್ಟು ಹೋಗುತ್ತಿದೆ. ನಾನು ಸುಮಾರು 3-4 ಸಲ ಸುಟ್ಟಿರುವ ಸ್ಥಳಗಳಿಗೆ ಮೈಸೂರಿನ ಪತ್ರಕರ್ತರನ್ನು ಕರೆದುಕೊಂಡು ಹೋಗಿ ನೋಡಿದ್ದೇನೆ. ಅದೇ ಪ್ರದೇಶದಲ್ಲಿ ಆನೆಗಳು ಬೆಂದು ಹೋಗಿರತಕ್ಕಂಥಾದ್ದೂ ಇದೆ. ಇದನ್ನು ತಾವು ಲಘುವಾಗಿ ತೆಗೆದುಕೊಳ್ಳುವುದಿಲ್ಲ. ಅಧಿಕಾರಿಗಳು ಬರೆದುಕೊಟ್ಟಂಥ ಹೇಳಿಕೆಯನ್ನು ಕೊಡುವುದಿಲ್ಲ. ನಿಜವಾಗಿಯೂ ಇಲ್ಲಿ ಅನೇಕ ವನ್ಯ ಮೃಗಗಳು ನಾಶವಾಗಿದೆ, ಪಕ್ಷಿಗಳು ನಾಶವಾಗಿವೆ, ಜಿಂಕೆಗಳು ನಾಶವಾಗಿದೆ. ನೀವು ತನಿಖೆ ಮಾಡಿಸಿದರೆ ಇವೆಲ್ಲವು ಸ್ಪಷ್ಟವಾಗಿ ಹೊರಗೆ ಬರುತ್ತದೆ. ಆದ್ದರಿಂದ ತನಿಖೆ ಮಾಡಿಸಿ

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ : ಪೇಪರ್ ನೋಡಿ ನಿಮಗೇ ತಿಳಿಯುತ್ತದೆ.

ಶ್ರೀ ಡಿ. ಮಂಜುನಾಥ : ನಾನು ನಿಮಗೆ ಉತ್ತರ ಹೇಳುತ್ತೇನೆ ಕೇಳಿ. ನಾನು ನಿಮ್ಮನ್ನೂ ಜೊತೆಗೆ ಕರೆದುಕೊಂಡು ಹೋಗುತ್ತೇನೆ, ಎಷ್ಟು ಸುಟ್ಟು ಹೋಗಿದೆ, ಎಷ್ಟು ಲಾಸ್ ಆಗಿದೆ ಎನ್ನುವುದನ್ನು ನೋಡೋಣ. ಅದು ನಿಜವಾಗಿದ್ದರೆ ಖಂಡಿತವಾಗಿಯೂ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಎ) ಏತನೀರಾವರಿ ಯೋಜನೆಗಳಿಗೆ ನೀರನ್ನೆತ್ತಲು ಸರ್ಕಾರದಿಂದ ಅನುಮತಿ ಪಡೆದುಕೊಳ್ಳುವುದರ ಸುತ್ತೋಲೆ ಕುರಿತು.

+ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಉಪಾಧ್ಯಕ್ಷರೇ, ಸರ್ಕಾರದ ಒಂದು ಭಾರೀ ವಿಪರ್ಯಾಸದ ಸುತ್ತೋಲೆಯ ಬಗ್ಗೆ ಹೇಳುತ್ತೇನೆ. ಏತ ನೀರಾವರಿ ಯೋಜನೆಗಳಿಗೆ ನೀರನ್ನೆತ್ತಲು ನಾವು ಸರ್ಕಾರದಿಂದ ಅನುಮತಿ ಪಡೆದುಕೊಳ್ಳಬೇಕು. ಆ ಸುತ್ತೋಲೆಯಲ್ಲಿ ಕೊಟ್ಟಿರುವುದನ್ನು ನೋಡಿದರೆ ಇದು ನಿಜವಾಗಿ ರೈತರ ವಿರೋಧಿ ಸರ್ಕಾರ ಎಂದು ಹೇಳಬೇಕಾಗುತ್ತದೆ. ಏತ ನೀರಾವರಿ ವ್ಯವಸ್ಥೆಯ ಮೂಲಕ ನಾವು ಬೇಸಿಗೆಯ ಕಾಲದಲ್ಲಿ ಅಂದರೆ ಜನವರಿಯಿಂದ ಜೂನ್‌ವರೆಗೆ ನೀರನ್ನು ಉಪಯೋಗ ಮಾಡಿಕೊಳ್ಳುತ್ತೇವೆ. ಆದರೆ ಇದಕ್ಕೆ ವ್ಯತಿರಿಕ್ತವಾಗಿರತಕ್ಕಂಥ ವಿಚಾರ ಆ ಸುತ್ತೋಲೆ ಯಲ್ಲಿದೆ. ನೀರಾವರಿ ಇಲಾಖೆಯ ಅಧಿಕಾರಿಗಳು ಈ ರೀತಿಯ ಪರವಾನಗಿಯನ್ನು ನೀಡುವಾಗ ಬೇಸಿಗೆ ತಿಂಗಳನ್ನು